(9)

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು.

ಸಂಖ್ಯೆ:-ಆ.ಆ.ಕಾ/ಪಿಎಸ್‌ಆರ್/ 9/16-17/2326 ದಿನಾಂಕ:-20-06-2016.

## ಕಛೇರಿ ಆದೇಶ

ವಿಷಯ:- ಆನ್‌ಲೈನ್ ಮುಖಾಂತರ ಉದ್ದಿಮೆ ಪರವಾನಿಗೆಗಳನ್ನು ನವೀಕರಣ ಅವಧಿಯನ್ನು ದಂಡದೊಂದಿಗೆ ಮುಂದುವರಿಸುವ ಬಗ್ಗೆ.

ಉಲ್ಲೇಖ:- 1. ಕೆಆಸ್ಥಾಪ/75/2015-16, ದಿನಾಂಕ:-24-03-2016.

2. ಪಿ.ಎಸ್.ಆರ್(ಜ)/10815/2015-16, ದಿನಾಂಕ:-31-01-2016 ಮತ್ತು 29-02-2016.

************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2016-17ನೇ ಸಾಲಿನ ಉದ್ದಿಮೆ ಪರವಾನಿಗೆ ನವೀಕರಣವನ್ನು ದಿನಾಂಕ:-01-02-2016 ರಿಂದ ಪ್ರಾರಂಭಿಸಲಾಗಿತ್ತು. ಹಿಂದಿನ ವರ್ಷಗಳಂತೆ ಜುಲೈ 1 ರಿಂದ ಉದ್ದಿಮೆ ಪರವಾನಿಗೆ ತಂತಾನೆ ರದ್ದು ಆಗಲಿದ್ದು ಉದ್ದಿಮೆಯನ್ನು ಮುಚ್ಚಲು ಕ್ರಮವಹಿಸಲಾಗುತಿತ್ತು. ಈ ಸಾಲಿನಲ್ಲೂ ಸಹ ಉಲ್ಲೇಖ 2ರ ಸುತ್ತೋಲೆಗಳಂತೆ ಉದ್ದಿಮೆ ಪರವಾನಿಗೆಯು ಜುಲೈ 1ರ ನಂತರ ರದ್ದಾಗುತ್ತದೆ. ಈ ಕ್ರಮದಿಂದಾಗಿ ಉದ್ದಿಮೆದಾರರು ಜುಲೈ 1ರ ನಂತರ ಹೊಸದಾಗಿ ಪರವಾನಿಗೆ ಪಡೆಯುತ್ತಿದ್ದು ಇದರಿಂದಾಗಿ ಪಾಲಿಕೆಗೆ ಆರ್ಥಿಕವಾಗಿ ನಷ್ಟವಾಗುತ್ತಿತ್ತು. ಕೆ.ಎಂ.ಸಿ ಕಾಯ್ದೆ ಹಾಗೂ ಬೈಲಾಗಳಲ್ಲಿ ಉದ್ದಿಮೆ ಪರವಾನಿಗೆಯನ್ನು 3 ವರ್ಷಗಳವರೆಗೆ ನವೀಕರಿಸಲು ಅವಕಾಶವಿರುವುದರಿಂದ ಈ ಬಗ್ಗೆ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಉಲ್ಲೇಖ (1)ರ ನಡವಳಿಯಂತೆ ಎಲ್ಲಾ ವಿಧದ ಉದ್ದಿಮೆ ಪರವಾನಿಗೆ ನವೀಕರಣಕ್ಕಾಗಿ ಒಂದು ವೇಳೆ ಜೂನ್ ತಿಂಗಳ ನಂತರದ ತಿಂಗಳುಗಳಿಗೂ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ, ಪರವಾನಿಗೆ ನವೀಕರಣ ಶುಲ್ಕ + ಶೇಖಡ 100% ರಷ್ಟು ದಂಡ ಸಹಿತ ಮಾತ್ರ ಪಡೆದುಕೊಂಡು ನವೀಕರಣಕ್ಕೆ ಅವಕಾಶ ಕಲ್ಪಿಸುವ ತಿದ್ದುಪಡಿಯೊಂದಿಗೆ ಆಯುಕ್ತರ ದಿನಾಂಕ:-23-03-2016ರ ಟಿಪ್ಪಣಿಯನ್ನು ಒಪ್ಪಿ ತೀರ್ಮಾನಿಸಿರುತ್ತಾರೆ.

ಆದುದರಿಂದ ಜುಲೈ 1 ರಿಂದ ಅನ್ವಯವಾಗುವಂತೆ 3 ವರ್ಷಗಳ ಅವಧಿ ತನಕ ಪರವಾನಿಗೆ ನವೀಕರಿಸದ ಉದ್ದಿಮೆಗಳ ಪರವಾನಿಗೆಯನ್ನು ಶುಲ್ಕದ ಜೊತೆ ಶೇ.100% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ಪಡೆದು ನವೀಕರಿಸಲು ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು:-

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
2. ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸಿದೆ.
3. ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಕಳುಹಿಸುತ್ತಾ ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಪಾಲಿಕೆಯ ಸದಸ್ಯರ ಗಮನಕ್ಕೆ ತರಲು ಕಳುಹಿಸಿದೆ.
5. ಜಂಟಿ ಆಯುಕ್ತರು (ಆರೋಗ್ಯ)/ಎಲ್ಲಾ ವಲಯ ಜಂಟಿ ಆಯುಕ್ತರು ರವರಿಗೆ ಕಳುಹಿಸಿದೆ.
6. ಮುಖ್ಯ ಆರೋಗ್ಯಾಧಿಕಾರಿ ರವರ ಮುಂದಿನ ಕ್ರಮಕ್ಕಾಗಿ.
7. ಎಲ್ಲಾ ಆರೋಗ್ಯಾಧಿಕಾರಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ಸಂಬಂಧಪಟ್ಟ ಉಪ ಆರೋಗ್ಯಾಧಿಕಾರಿಗಳು/ಆರೋಗ್ಯ ವೈದ್ಯಾಧಿಕಾರಿಗಳ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
9. ಕಛೇರಿ ಕಡತಕ್ಕೆ.